# ‘ಕಥೆ ಹೇಳುವುದೊಂದು ಅದ್ಭುತ ಕೆಲಸ’

**ಕಿರುತೆರೆಯ ಜನಪ್ರಿಯ ನಟಿ ರಂಜನಿ ರಾಘವನ್, ಹಿರಿತೆರೆಯಲ್ಲಿಯೂ ಹಾಜರಿ ಹಾಕಲು ಸಜ್ಜಾಗಿದ್ದಾರೆ. ಅದಕ್ಕೆ ಪೂರಕವಾಗಿ ಭಿನ್ನ ಮತ್ತು ಅಷ್ಟೇ ಸಮರ್ಥವಾದ ಪಾತ್ರಗಳೂ ದೊರಕುತ್ತಿರುವ ಖುಷಿಯಲ್ಲಿ ಅವರಿದ್ದಾರೆ.**

■ ಪದ್ಮನಾಭ ಭಟ್

‘ಕಥೆ ಹೇಳುವುದು ಒಂದು ಅದ್ಭುತವಾದ ಕೆಲಸ ಎಂದು ನನಗೆ ಅನಿಸಿಬಿಟ್ಟಿದೆ. ಬರವಣಿಗೆಯ ಮೂಲಕವೇ ಆಗಲಿ, ನಟನೆಯ ಮೂಲಕವೇ ಆಗಲಿ, ಕಥೆ ಹೇಳಲು ನನಗೆ ಯಾವ ಸ್ಫೂರ್ತಿಯೂ ಬೇಕಾಗಿಲ್ಲ. ಅದೇ ಸ್ಫೂರ್ತಿಯನ್ನು ತುಂಬುವ ಕೆಲಸ’.

ಚಾಕ್‌ಪೀಸ್ ಹಿಡಿದು ಗ್ರೀನ್ ಬೋರ್ಡ್ ಮುಂದೆ ನಿಂತು ನಗುನಗುತ್ತ ಪ್ರತಿದಿನ ‘ಕನ್ನಡ ಕ್ಲಾಸ್’ ಮಾಡುವ ‘ಕನ್ನಡತಿ ಧಾರಾವಾಹಿ’ಯ ರಂಜನಿ ರಾಘವನ್, ಟೀಚರ್ ಸ್ಟೈಲಿನಲ್ಲಿಯೇ ಹೀಗೆ ಹೇಳಿ ನಸುನಕ್ಕರು. ಈ ಮಾತಿನಲ್ಲಿ ಅವರ ಬದುಕಿನ, ಆಸಕ್ತಿಯ ಹಲವು ಕವಲುಗಳ ಸ್ಮರಣೆಯಿತ್ತು; ಭವಿಷ್ಯದಲ್ಲಿ ಹೊರಳಿಕೊಳ್ಳುವ ದಿಕ್ಕು ದೆಸೆಗಳ ಸೂಚನೆಯೂ ಇತ್ತು.

ಹಾಗೆ ನೋಡಿದರೆ, ತಾನು ನಟಿಯಾಗಬೇಕು, ಪ್ರೇಕ್ಷಕರನ್ನು ರಂಜಿಸಬೇಕು ಎಂದು ರಂಜನಿ ಯಾವತ್ತೂ ಅಂದುಕೊಂಡವರೇ ಅಲ್ಲ. ಕಾಲೇಜು ದಿನಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ಆಸಕ್ತಿಯಿತ್ತು. ಹಾಗಾಗಿ ಭಾಗವಹಿಸುತ್ತಿದ್ದರು. ಹಾಗೆ ಸುಮ್ಮನೆ ಎಂದು ಭಾಗವಹಿಸಿದ ಆಡಿಷನ್‌ನಲ್ಲಿ ಆಯ್ಕೆಯಾಗಿ ನಾಗಾಭರಣ ನಿರ್ದೇಶನದ ‘ಕೆಳದಿ ಚೆನ್ನಮ್ಮ’ ಧಾರಾವಾಹಿಗೆ ಆಯ್ಕೆಯಾದರು. ಈ ಧಾರಾವಾಹಿ ನಟನೆಯತ್ತ ಆಸಕ್ತಿಯನ್ನೇನೋ ಮೊಳೆಯಿಸಿತ್ತು. ಆದರೆ ನಟನೆಯೇ ತನ್ನ ಬದುಕಲ್ಲಿ ಕೈ ಹಿಡಿಯುತ್ತದೆ ಎಂಬ ನಂಬಿಕೆ ಇರಲಿಲ್ಲ. ಹಾಗಾಗಿ ಎಂಬಿಎ ಮಾಡಿದರು. ಉದ್ಯಮಿ ಆಗಬೇಕು ಎಂಬ ಕನಸೂ ಕಂಡಿದ್ದರು. ಆದರೆ ಆಗಲೇ ಬಣ್ಣದ ಲೋಕದ ಗಂಧವನ್ನು ಅಂಟಿಸಿಕೊಂಡ ಬೆರಳುಗಳು ನಟನೆಯ ಕಡೆಗೇ ಸೆಳೆದವು. ‘ರೂಪಾಂತರ’ ಎಂಬ ಹವ್ಯಾಸಿ ರಂಗತಂಡದಲ್ಲಿ ಒಂದು ವರ್ಷ ರಂಗಚಟುವಟಿಕೆಗಳಲ್ಲಿಯೂ ಭಾಗಿಯಾದರು.

‘ಪುಟ್ಟಗೌರಿ ಮದುವೆ’ ಧಾರಾವಾಹಿಯಲ್ಲಿ ಹಿರಿಗೌರಿಯಾಗಿ ಬಂದ ನಂತರ ರಂಜನಿ ದೆಸೆ ಪೂರ್ತಿ ಬದಲಾಯ್ತು. ಅವರು ಮನೆ ಮನೆಯಲ್ಲಿಯೂ ಗೌರಿಯಾಗಿಯೇ ಗುರ್ತಿಸತೊಡಗಿದರು. ಹೀಗೆ ಪಾತ್ರದ ಮೂಲಕವೇ ತಮ್ಮನ್ನು ಗುರ್ತಿಸುವುದು ಅವರಿಗೆ ಸುತರಾಂ ಇಷ್ಟವಿಲ್ಲ.

“ ‘ಪುಟ್ಟಗೌರಿ ಮದುವೆ’ ಧಾರಾವಾಹಿಯಲ್ಲಿ ನಟಿಸಿದಾಗ ಎಲ್ಲರೂ ರಂಜನಿಯೇ ಗೌರಿ ಎಂದು ಗುರ್ತಿಸುತ್ತಿದ್ದರು. ಆದರೆ ಈಗ ‘ಕನ್ನಡತಿ’ ಧಾರಾವಾಹಿಯಲ್ಲಿ ನಟಿಸಲು ಶುರುಮಾಡಿದ ಮೇಲೆ, ‘ರಂಜನಿ ಒಬ್ಬ ಕಲಾವಿದೆ. ಅವಳು ಮೊದಲು ಗೌರಿಯಾಗಿ ನಟಿಸಿದ್ದಳು. ಈಗ ಕನ್ನಡತಿ ಧಾರಾವಾಹಿಯಲ್ಲಿ ನಟಿಸುತ್ತಿದ್ದಾಳೆ’ ಎಂದು ಗುರ್ತಿಸುತ್ತಿದ್ದಾರೆ. ನನಗೆ ನನ್ನನ್ನು ಒಬ್ಬಳು ನಟಿಯಾಗಿಯೇ ಗುರ್ತಿಸುವುದು ಇಷ್ಟ. ಒಂದು ಪಾತ್ರವೇ ನಾನು ಎಂಬಂತೆ ಗುರ್ತಿಸುವುದು ಇಷ್ಟವಿಲ್ಲ” ಎನ್ನುವ ರಂಜನಿ ‘ಇಷ್ಟದೇವತೆ’ ಎಂಬ ಧಾರಾವಾಹಿಗೆ ಚಿತ್ರಕಥೆಯನ್ನೂ ಬರೆದಿದ್ದರು.

ಕಿರುತೆರೆಯಲ್ಲಿ ಸಾಕಷ್ಟು ಜನಪ್ರಿಯತೆ ಗಳಿಸಿರುವ ರಂಜನಿ ‘ರಾಜಹಂಸ’ ಸಿನಿಮಾ ಮೂಲಕ ಹಿರಿತೆರೆಗೂ ಅಡಿಯಿಟ್ಟರು. ಈಗ ಅವರು ನಟಿಸಿರುವ ‘ಠಕ್ಕರ್’ ಸಿನಿಮಾ ಬಿಡುಗಡೆಗೆ ಸಿದ್ಧವಾಗಿದೆ. ದಿಗಂತ್ ಜೊತೆಗೆ, ವಿನಾಯಕ

